ಮಿಥ್ಯೆಯೆನಿಸತೊಡಗಿತ್ತು. ಯಾಕೆಂದರೆ, ರಂಗನ್‌ನ ಕಡೆಯ ದಿನಗಳೆಂದು ಗೊತ್ತಾದರೂ 'ಸಾವೇಕಾಯಿತ್ತೆಲೆ ಚೆನ್ನಿಗನೆ' ಎಂದು ಎದೆ ಬಿರಿದು ರೋದಿಸುವಂತಹ ದುಃಖ ನನಗೇನೂ ಆಗಲಿಲ್ಲ. ಲೋಕಸತ್ಯವಾಗದೇ ಯಾವುದು ಯಾವತ್ತೂ ಸತ್ಯವಾಗುವುದಿಲ್ಲವೆಂದು ಇತ್ತೀಚೆಗೆ ದಟ್ಟವಾಗಿ ಅನ್ನಿಸತೊಡಗಿತ್ತು.

ಆಪರೇಶನ್ನಿನ ಹಿಂದಿನ ರಾತ್ರಿ, ತಡವಾಗಿಯೇ ಅವನ ವಾರ್ಡಿಗೆ ಹೋದೆ. ಅರೆ ತೆರೆದ ಬಾಗಿಲಿನಿಂದ ಅವರಿಬ್ಬರ ಮಾತುಗಳು ಕೇಳಿಸುತ್ತಿತ್ತು.

"ಸತ್ಯ ಹೇಳ್ರಿ, ನೀವು ಫಿಲೋಮಿನಾನ... ನಿಜವಾಗ್ಲೂ" ಎಂದು ಗದ್ಗದ ಕಂಠದಲ್ಲಿ ಕೇಳುತ್ತಿದ್ದವಳಿಗೆ ಅವನು ಸಾಂತ್ವನಿಸುತ್ತಿದ್ದ. "ಐ ಆ್ಯಮ್ ಎ ಸಿಕ್ ಮ್ಯಾನ್ ಅರು. ಐ ಡೋಂಟ್ ನೋ ವೆನ್ ಐ ಎಲ್ ಕ್ರೋಕ್. ಅವಳು ನನ್ನ ಅತ್ಯಂತ ಆತ್ಮೀಯ ಗೆಳತಿ ಮಾತ್ರ" ಎಂದ ಮಾತು ನನ್ನ ಕಿವಿಗೂ ಸ್ಪಷ್ಟವಾಗೇ ಬಿದ್ದು ನನಗೂ ಅದು ಸತ್ಯವೇ ಎನಿಸಿತು.

ಅವನ ವೈಕುಂಠ ಸಮಾರಾಧನೆಯ ದಿನ ಕೆಲ ಆತ್ಮೀಯರು ಅವನ ಕುರಿತು ಮಾತನಾಡಲು ಏರ್ಪಾಡು ಮಾಡಿದ್ದರು. ಎಲ್ಲರೂ ನನ್ನನ್ನು ಬಲವಂತವಾಗಿ ವೇದಿಕೆಗೆ ದಬ್ಬಿದರು. ನಾನು ಕುಂಕುಮ ಇಡುವುದು ಬಿಡುವುದು ಯಾರಿಗೂ ಮ್ಯಾಟರಾಗುತ್ತಿರಲಿಲ್ಲವಾದ್ದರಿಂದ ನನ್ನ ಬೋಳು ಹಣೆಯನ್ನು ಯಾರೂ ವಿಶೇಷವಾಗಿ ಪರಿಗಣಿಸಲಿಲ್ಲ.

"ರಂಗನ್ ಕೇವಲ ನನ್ನ ಬಾಸ್ ಅಲ್ಲ, ಸಹೋದ್ಯೋಗಿಯಲ್ಲ. ನನ್ನ ಹೃದಯಕ್ಕೆ ತುಂಬಾ ಹತ್ತಿರವಾಗಿದ್ದವರು. ಅವರಂತಹ ಉತ್ತಮ ಮನುಷ್ಯ ಒಳ್ಳೆಯ ಸ್ನೇಹಿತನಿಲ್ಲದ ನನ್ನ ಬದುಕು ನಿರ್ವಾತವಾಗಿ ಬಿಟ್ಟಿದೆ. ನಥಿಂಗ್ ಕ್ಯಾನ್‌ಫಿಲ್ ದಟ್ ವಾಯ್ಡ್ ಅವರೊಬ್ಬ ನನ್ನ ಅತ್ಯುತ್ತಮ ಗೆಳೆಯ..." ನಾನು ಈ ಸುಳ್ಳನ್ನು ನೂರನೇಬಾರಿ ಹೇಳುತ್ತಿದ್ದೆ.

ನನಗೆ ಮುಂದೆ ಮಾತನಾಡಲಾಗಲಿಲ್ಲ.

## ಉಷಾ ನರಸಿಂಹನ್

ಕತೆಗಾರ್ತಿ ಉಷಾ ಮೈಸೂರಿನಲ್ಲಿ ನೆಲೆಸಿರುವ ಗೃಹಿಣಿ. ಅವರ ತಲಾ ಎರಡು ಕಾದಂಬರಿಗಳು, ಕಥಾಸಂಕಲನಗಳು, ಕವನ ಸಂಕಲನಗಳು ಪ್ರಕಟವಾಗಿವೆ. 'ಮಯೂರ'ವೂ ಸೇರಿದಂತೆ ಕೆಲವು ಪತ್ರಿಕೆಗಳಲ್ಲಿ ಕತೆಗಳನ್ನು ಪ್ರಕಟಿಸಿದ್ದಾರೆ. 'ಪಯಣರಾಗ' ಎಂಬ ಭಾವಗೀತೆಗಳ ಧ್ವನಿ ಸುರಳಿಯನ್ನು ಹೊರತಂದಿದ್ದಾರೆ. ಅವರ ನಾಟಕ – 'ಕದಳಿ ಕಲ್ಯಾಣ'.